ಎಷ್ಟೋ ಸಲ ಜೀವನದಲ್ಲಿ ಒದಗಿ ಬರುವ ಅನುಭವಗಳು ಅವುಗಳಲ್ಲಿರುವ ಮಾಧುರ್ಯದಿಂದಲೋ, ರಂಜಿಸುವ ಗುಣದಿಂದಲೋ ಒಮ್ಮೊಮ್ಮೆ ನೋವು, ಬರ್ಬರತೆಯಿಂದಲೋ ಉತ್ತಮ ಕತೆಗಳಾಗಿ ಅರಳಿಕೊಳ್ಳಲು ಆಸರೆಯಾಗುತ್ತವೆ. ಅಂಥ ವಿಭಿನ್ನ, ವಿಚಿತ್ರ ಅನುಭವಗಳಿಗಾಗಿ ಕಾತರಿಸುತ್ತ ಅವುಗಳಿಗೆ ಎಂದೂ ಬೆನ್ನು ತಿರುಗಿಸದೆ, ಅಂಥದ್ದನ್ನು ಅಪೇಕ್ಷಿಸುತ್ತ ಹುಡುಕಿಕೊಂಡು ಹೋದದ್ದೂ ಉಂಟು.

ಸುಂದರ ಉದ್ಯಾನವನಗಳಲ್ಲಿ ಮರದ ಮೇಲಿನಿಂದ ಹೂಗಳು ಉದುರುದುರಿ ಸುತ್ತ, ಹೂ ಹಾಸಿಗೆ ನಿರ್ಮಾಣವಾಗಿರುವಂತಹ ಸ್ಥಳ ಆಯ್ದುಕೊಳ್ಳುತ್ತೇನೆ, ಸಿಗುವುದು ಅಪರೂಪ, ಒಮ್ಮೊಮ್ಮೆ ಏನು? ಅನೇಕ ಬಾರಿ ಹಾಗೆ ಸಿಗುವುದೇ ಇಲ್ಲ. ಆಗೆಲ್ಲಾ ಗಾಳಿ ತಂಪಾಗಿ ಬೀಸುವ ಜಾಗಕ್ಕೆ ನನ್ನಾಸೆಯನ್ನು ಸೀಮಿತಗೊಳಿಸಿ ಬೆಂಚಿನ ಮೇಲೆ ಕುಳಿತುಕೊಳ್ಳುತ್ತೇನೆ. ಕೈಯಲ್ಲಿ ನಮ್ಮ ಪರಮಾಪ್ತ ಅಸ್ತ್ರ ಪೆನ್ನು, ಡೈರಿಯೋ, ನೋಟ್ ಬುಕ್ಕೋ ಇದ್ದೇ ಇರುತ್ತದೆ. ನನ್ನ ಚಿಕ್ಕಚೀಲದಲ್ಲಿ ಒಂದು ಪುಟ್ಟ ಬಾಟಲಿನಲ್ಲಿ ನೀರು, ಒಮ್ಮೊಮ್ಮೆ ಬಾಳೆಹಣ್ಣು ಅಥವಾ ಬಿಸ್ಕತ್ತುಗಳು ಇನ್ನೊಂದು ಮರೆತೆ. ಮೊಬೈಲು. . . ಯಾರಿಗೋ ಫೋನ್ ಮಾಡುವುದಕ್ಕಲ್ಲ, ಪ್ರಕೃತಿಯ ರಮ್ಯ ದೃಶ್ಯಗಳನ್ನು ಮೊಬೈಲ್ ಕ್ಯಾಮೆರಾದಲ್ಲಿ ಸೆರೆಹಿಡಿದು ಆನಂದಿಸುವ ಹೊಸ ಹುಚ್ಚು ಇತ್ತೀಚೆಗೆ ಅಂಟಿಕೊಂಡಿದೆ.

ಅಂದೇನೋ ನನ್ನ ಅದೃಷ್ಟ! ಮರವೊಂದರಿಂದ ಆಕಾಶ ನೀಲಿ ಬಣ್ಣದ ಹೂಗಳು ಮರದ ಸುತ್ತ ಉದುರಿ ಸುಂದರವಾಗಿ ಕಾಣುತ್ತಿತ್ತು. ಅಲ್ಲಿ ಬೆಂಚಿದ್ದುದು ನನಗೆ ಅನುಕೂಲವಾಯಿತು. ಆ ನಿಧಿಯನ್ನು ಇನ್ನಾರಾದರೂ ಕಸಿದು ಬಿಟ್ಟಾರು ಎನ್ನುವ ಧಾವಂತದಲ್ಲಿ ಅಲ್ಲಿಗೆ ಧಾವಿಸಿದೆ. ನಾನು ಕುಳಿತಿದ್ದ ಸ್ಥಳದಿಂದ ಸ್ವಲ್ಪ ದೂರದಲ್ಲೇ ಇನ್ನೊಂದು ಬೆಂಚು.



ನಾನು ತಂಗಾಳಿಯ ಸ್ಪರ್ಶ ಸುಖ ಅನುಭವಿಸುತ್ತ, ಹತ್ತು ನಿಮಿಷಗಳಾಗಿರಬಹುದು. ಆ ಇನ್ನೊಂದು ಬೆಂಚಿನ ಬಳಿಗೆ ದೂರ ಪ್ರಯಾಣದಿಂದ ಬಳಲಿದಂತೆ ಕಾಣುತ್ತಿದ್ದ ಯವಕನೊಬ್ಬ ಬಂದ. ತನ್ನ ಕೈಯಲ್ಲಿದ್ದ ಲಗೇಜನ್ನು ಬೆಂಚಿನ ಮೇಲಿಟ್ಟು ಕುಳಿತುಕೊಂಡ.

ಅಸ್ತವ್ಯಸ್ತವಾಗಿ ಅತ್ತಿತ್ತ ಚದುರಿದ್ದ ಕ್ರಾಪ್, ಮುಖದಲ್ಲಿ ಬಳಲಿಕೆಯೊಂದಿಗೆ ಯಾವುದೋ ನಿರಾಸೆ, ನೋವು. . ಕೆಲ ನಿಮಿಷಗಳ ನಂತರ ಸುತ್ತ ಮುತ್ತ ಕಣ್ಣಾಡಿಸಿ ನನ್ನೆಡೆ ನೋಡಿ 'ಮ್ಯಾಡಂ, ಸ್ವಲ್ಪ ನೀರಿದ್ದರೆ ಕೊಡುತ್ತೀರಾ?' ಎಂದ. ನೀರಿನ ಬಾಟಲಿಯನ್ನು ನೀಡುತ್ತ 'ಜೊತೆಗೆ ಎರಡು ಬಾಳೆಹಣ್ಣುಗಳನ್ನೂ ತೆಗೆದುಕೊಳ್ಳಿ' ಎಂದೆ. 'ನೀರು ಸಾಕು' ಎಂದ. 'ಬೇಡವೆನ್ನಬೇಡಿ, ಊಟ ಮಾಡಿದ ಹಾಗೆ ಕಾಣುವುದಿಲ್ಲ' ಎಂದೆ. ಮತ್ತೆ ಹೇಳಿಸಿಕೊಳ್ಳದೆ ಎದ್ದು ಬಂದು ಸ್ವೀಕರಿಸಿ ಥ್ಯಾಂಕ್ಸ್ ಎನ್ನುತ್ತ ತನ್ನ ಬೆಂಚಿಗೆ ಹಿಂತಿರುಗಿದ. ಆಮೇಲೆ ಆತ್ಮೀಯವಾಗಿ ಮಾತಾಡುತ್ತ ನನ್ನ ಗೆಳೆಯನೊಬ್ಬ ಬಂದು ನನ್ನನ್ನು ಕರೆದೊಯ್ಯ ಬೇಕಿತ್ತು, ಅವನೆಲ್ಲೋ ಟ್ರಾಫಿಕ್‌ನಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆ. ರೈಲ್ವೆ ನಿಲ್ದಾಣದಿಂದ ಹೊರ ಬಂದವನು ಅಲ್ಲೆಲ್ಲಾ ಹೊಗೆ ಧೂಳು ಇದ್ದುದರಿಂದ ಈ ಉದ್ಯಾನವನ ಕಾಣಿಸಿ ಈ ಕಡೆ ಬಂದೆ ಎಂದ. ಇಲ್ಲಿ ಏನಾದರೂ ಅನಿವಾರ್ಯ ಕೆಲಸವಿತ್ತೆ? ಎಂದೆ. ಒಂದು ಕ್ಷಣ ಹೇಳಲೋ ಬೇಡವೋ ಎಂದೋ ಏನೋ ಸುಮ್ಮನಿದ್ದು, 'ನಾನು ಬಂದ ಕಾರಣ ಕೇಳಿದರೆ ನೀವು ಏನೆನ್ನುತ್ತೀರೊ, ಬಹುಶಃ ನಗುವಿರೋ ಗೊತ್ತಿಲ್ಲ. ಅಪ್ಪ ಅಮ್ಮ ಮದುವೆಯಾಗೆಂದು ಬಲವಂತ ಮಾಡುತ್ತಿದ್ದಾರೆ. ಅವರು ತೋರಿಸಿದ ಹೆಣ್ಣುಗಳು ನನಗೆ ಇಷ್ಟವಾಗಲಿಲ್ಲ. ಅವರೋ ಬೇಸತ್ತು ಹೋಗಿದ್ದಾರೆ. ಅಮ್ಮನಂತೂ ಕೋಪದಿಂದ ನನ್ನೊಂದಿಗೆ ಮಾತೇ ನಿಲ್ಲಿಸಿದ್ದಾರೆ. ನಾನೇ ಹುಡುಕಿಕೊಂಡು ಬರುತ್ತೇನೆ ಎಂದು ಸೀದ ಮನೆಬಿಟ್ಟು ಬಂದುಬಿಟ್ಟೆ. ನನ್ನ ಆತ್ಮೀಯ ಗೆಳೆಯನೊಬ್ಬ ಈ ಊರಿನಲ್ಲಿದ್ದಾನೆ. ಇಲ್ಲಿ ನನ್ನಾಸೆ ಫಲಿಸಬಹುದೇನೋ ನೋಡಬೇಕು' ಎಂದ. ಮುಹೂರ್ತ ಕೂಡಿ ಬಂದರೆ ಒಳ್ಳೆಯ ಕೆಲಸಗಳು ಆಗಿಯೇ ಬಿಡುತ್ತವೆ ಬಿಡಿ ಎಂದು ಉತ್ಸಾಹ ತುಂಬಲೆತ್ನಿಸಿದೆ.

ಆಮೇಲೆ ನಾನು ಮಾತು ನಿಲ್ಲಿಸಿ ಪುಸ್ತಕವೊಂದರಲ್ಲಿ ಮಗ್ನಳಾದೆ. ಏಳೆಂಟು ನಿಮಿಷಗಳಾಗಿರಬಹುದು. ದೂರದಲ್ಲಿ ಯುವತಿಯೊಬ್ಬಳು ಬರುತ್ತಿದ್ದುದು ಕಂಡಿತು. ಯವಕನಿದ್ದೆಡೆಗೇ ಬರುತ್ತಿರುವುದನ್ನು ಕಂಡು ಅವನೂ ಕುತೂಹಲ ತಾಳಿದ. ಅವಳು ಬರುತ್ತಿದ್ದ ಬೆಡಗಿಗೇ ಅವನು ಉತ್ಸಾಹ ತಾಳಿದ. ನಾನು ನೋಡು ನೋಡುತ್ತಿದ್ದಂತೆ ಅವಳು ಅಲ್ಲಿಗೇ ಬಂದು ಅವನ ಪಕ್ಕದಲ್ಲಿಯೇ ಕುಳಿತಳು. ಅವನ ಪಾಡು ದೇವರಿಗೇ ಗೊತ್ತು! ನಖಶಿಖಾಂತ ಬೆವತು ಹೋದ. ಅವಳು ಸುಂದರವಾಗಿದ್ದಳು ಮಾತ್ರವಲ್ಲ, ಅಮಾಯಕ, ಮುಗ್ಧಸ್ನಿಗ್ಧ ಕಳೆ ಅವಳ ಮುಖವನ್ನು ಬೆಳಗುತ್ತಿತ್ತು. ಅವಳನ್ನು ನೋಡುತ್ತ ಅವನ ಕಣ್ಣುಗಳ ನಿರಾಶೆಯ ಕಾರ್ಮೋಡಗಳು ಕರಗಲಾರಂಭಿಸಿದವು. ನನ್ನ ಕಷ್ಟಕ್ಕೆ ಸ್ಪಂದಿಸಿ ಅಚ್ಚರಿಯಾಗಲೆಂದು ನನ್ನ ಗೆಳೆಯನೇ ಕಳುಹಿಸಿ ಕೊಟ್ಟನೋ ಎಂದುಕೊಂಡಿರಲೂ ಸಾಕು ಆ ಯುವಕ. ಅವನನ್ನು ನೋಡಿದವಳೇ ಅವಳು ನಾಚಿ ತಲೆ ತಗ್ಗಿಸಿದಳು. ಆದರೆ ಹೀಗೆ ಯಾರೋ ಹೆಣ್ಣೊಬ್ಬಳು ಇಷ್ಟು ಧೈರ್ಯವಾಗಿ ಅಪರಿಚಿತ ಪುರುಷನೊಬ್ಬನ ಪಕ್ಕದಲ್ಲಿ ಕುಳಿತರೆ